ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in.
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009

**ಸಂಖ್ಯೆ: ಕವಿಪ್ರನಿನಿ/ಬಿ99/58195/2024-25** **ದಿನಾಂಕ: 15.05.2024**

## ಸುತ್ತೋಲೆ

**ವಿಷಯ:** ರಾಜ್ಯವಾರು ಪದವೃಂದದ ಅಧಿಕಾರಿಗಳು ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1. ನಿಗಮದ ಅಧಿಸೂಚನೆ ಸಂಖ್ಯೆ:ಕವಿಪ್ರನಿನಿ/ಬಿ5ಬಿ/ 1011/2004-05 ದಿ: 20.10.2005 ರಲ್ಲಿ ಪ್ರಕಟಿಸಲಾದ ಕ.ವಿ.ಪ್ರ.ನಿ.ನಿ (ಕಾರ್ಯಾನಿರ್ವಹಣಾ ವರದಿಗಳು) ನಿಯಮಗಳು, 2005.
2. ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 53 SCR 2020, ಬೆಂಗಳೂರು, ದಿನಾಂಕ: 26.07.2021.

---

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಬೇರೆ ಸಂಸ್ಥೆಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ರಾಜ್ಯವಾರು ಪದವೃಂದದ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಸಲ್ಲಿಸುವ ವಿಷಯದಲ್ಲಿ ಉಲ್ಲೇಖಿತ ದಿನಾಂಕ: 26.07.2021 ರ ಸರ್ಕಾರದ ಅಧಿಸೂಚನೆಯಂತೆ ಈ ಕೆಳಕಂಡ ಕಾಲಮಿತಿಯನ್ನು ಗಮನಿಸಿ, ಅದರಂತೆ ಕ್ರಮ ವಹಿಸಲು ತಿಳಿಸಿದೆ.

| ಕ್ರ.ಸಂ | ವಿವರಗಳು | ಕಾಲಮಿತಿ |
|---|---|---|
| 1 | ಅಧಿಕಾರಿಗಳು ತಮ್ಮ ಸ್ವಂತ ನಿರ್ಧಾರಣಾ ವರದಿಗಳನ್ನು ವರದಿ ಮಾಡುವ ಪ್ರಾಧಿಕಾರಕ್ಕೆ (ತಕ್ಷಣದ ಮೇಲಾಧಿಕಾರಿಗೆ) ಸಲ್ಲಿಸಬೇಕಾದ ಕಾಲಮಿತಿ. | ಅಧಿಕಾರಿಗಳು ತಮ್ಮ ಸ್ವಂತ ನಿರ್ಧಾರಣಾ ವರದಿಗಳನ್ನು ಆರ್ಥಿಕ ವರ್ಷಾಂತ್ಯದ ನಂತರದ 30-ಏಪ್ರಿಲ್ ಒಳಗಾಗಿ ಸಿದ್ಧಪಡಿಸಿ ವರದಿಮಾಡುವ ಪ್ರಾಧಿಕಾರಕ್ಕೆ 30-ಜೂನ್ ರ ಒಳಗಾಗಿ ಸಲ್ಲಿಸಬೇಕು.<br>ಎಲ್ಲಾ ಅಧಿಕಾರಿಗಳು ತಮ್ಮ ಸ್ವಂತ ನಿರ್ಧಾರಣಾ ವರದಿಗಳನ್ನು ವರದಿಮಾಡುವ ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ, ಸಲ್ಲಿಸಿದ ದಿನಾಂಕ, ಪ್ರಾಧಿಕಾರದ ಹೆಸರು ಮತ್ತು ಸಂಪೂರ್ಣ ವಿಳಾಸವನ್ನು ನಿರ್ದೇಶಕರು (ಆ ಮತ್ತು ಮಾ.ಸಂ), ಕವಿಪ್ರನಿನಿ ರವರಿಗೆ ತಕ್ಷಣವೇ ತಿಳಿಸುವುದು. |
| 2 | ವರದಿ ಮಾಡುವ ಪ್ರಾಧಿಕಾರಗಳು ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪರಿಶೀಲನಾ ಪ್ರಾಧಿಕಾರಕ್ಕೆ (ತಕ್ಷಣದ ಮೇಲಾಧಿಕಾರಿಗೆ) ಸಲ್ಲಿಸಬೇಕಾದ ಕಾಲಮಿತಿ. | 31-ಜುಲೈ ರ ಒಳಗಾಗಿ ಪರಿಶೀಲನಾ ಪ್ರಾಧಿಕಾರಕ್ಕೆ ಸಲ್ಲಿಸಬೇಕು. |
| 3. | ಪರಿಶೀಲನಾ ಪ್ರಾಧಿಕಾರಗಳು ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಅಂಗೀಕಾರ ಪ್ರಾಧಿಕಾರಕ್ಕೆ (ತಕ್ಷಣದ ಮೇಲಾಧಿಕಾರಿಗೆ) ಸಲ್ಲಿಸಬೇಕಾದ ಕಾಲಮಿತಿ. | ಪರಿಶೀಲನಾ ಪ್ರಾಧಿಕಾರಕ್ಕೆ ಸಲ್ಲಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ (31-ಆಗಸ್ಟ್ ರ ಒಳಗಾಗಿ) ಅಂಗೀಕಾರ ಪ್ರಾಧಿಕಾರಕ್ಕೆ ಸಲ್ಲಿಸಬೇಕು. |

| | | |
|---|---|---|
| 4 | ಅಂಗೀಕಾರ ಪ್ರಾಧಿಕಾರಗಳು ಅಂಗೀಕಾರ ವರದಿಯೊಂದಿಗೆ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ನಿರ್ದೇಶಕರು(ಆಡಳಿತ ಮತ್ತು ಮಾ.ಸಂ) ಕವಿಪ್ರನಿನಿ ರವರ ಕಛೇರಿಗೆ ತಲುಪಿಸಬೇಕಾದ ಕಾಲಮಿತಿ | ಅಂಗೀಕಾರ ಪ್ರಾಧಿಕಾರಕ್ಕೆ ಸಲ್ಲಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ (30-ಸೆಪ್ಟಂಬರ್ ರ ಒಳಗಾಗಿ) ಕವಿಪ್ರನಿನಿಯ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಬೇಕು |

ಮುಂದುವರೆದು ವರದಿ ಮಾಡುವ ಪ್ರಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಅಧಿಕಾರಿಗಳು ನಿಗದಿತ ಅವಧಿಯೊಳಗೆ (ಏಪ್ರಿಲ್ ಒಳಗೆ) ತಮ್ಮ ಸ್ವಂತ ನಿರ್ಧಾರಣಾ ವರದಿಯನ್ನು ಸಲ್ಲಿಸದಿದ್ದಲ್ಲಿ, ಉಲ್ಲೇಖ-01 ರ ನಿಯಮ 5 ರಂತೆ ವರದಿ ಮಾಡುವ ಪ್ರಾಧಿಕಾರಿಗಳು ಕ್ರಮ ತೆಗೆದುಕೊಳ್ಳುವುದು, ಹಾಗೂ ಸ್ವಂತ ನಿರ್ಧಾರಣಾ ವರದಿಯನ್ನು ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವಂತೆ ಆದೇಶಿಸಿದೆ.

ಎಲ್ಲಾ ರಾಜ್ಯವಾರು ಪದವೃಂದದ ಅಧಿಕಾರಿಗಳು ಪ್ರತೀ ವರ್ಷವು ತಮ್ಮ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ನಿಗಧಿತ ಅವಧಿಯೊಳಗೆ ಸಲ್ಲಿಸದಿದ್ದಲ್ಲಿ, ಯಾವುದೇ ಸೂಚನೆ ನೀಡದೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ.,)**
**ಕವಿಪ್ರನಿನಿ**

**ಪ್ರತಿಗಳು:**

1. ವ್ಯವಸ್ಥಾಪಕ ನಿರ್ದೇಶಕರು, ವಿಸಕಂಗಳು/ ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ವಿಸಕಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ವಿಸಕಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ ವಿಸಕಂಗಳು.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/(ಪ್ರಸರಣ)/(ಆ. ಮತ್ತು ಮಾ.ಸಂ), ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ https://kptcl.karnataka.gov.in →eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ವಿಸಕಂಗಳು.
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ ವಿಸಕಂಗಳು.
3. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ), ಕವಿಪ್ರನಿನಿ, ವಿಸಕಂಗಳು.

**ಪ್ರತಿಗಳು ಮಾಹಿತಿಗಾಗಿ:**

1. ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ(ನೋ.ಸಂ.659).
2. ಶ್ರೀ.ಕೆ.ಶಿವಣ್ಣ, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ, ನಿರ್ದೇಶಕರು ಕವಿಪ್ರನಿನಿ & ವಿಸಕಂಗಳು
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಘ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಕೆ.ಆರ್.ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ವಿಸಕಂಗಳು/, ಪ.ಜಾ/ಪ.ಪಂ. ಅಧಿಕಾರಿಗಳ, ಸಂಘ, ಬೆಂಗಳೂರು.